# ಸಹಾಯಕ ಆಯುಕ್ತರ ನ್ಯಾಯಾಲಯ, ಬಳ್ಳಾರಿ

ಸಂ: ಕಂದಾಯ/ಅಪೀಲು/235/12-13 ದಿನಾಂಕ :30-08-2016

ಉಪಸ್ಥಿತರು: **ಶ್ರೀ ಲೋಕೇಶ್ ಪಿ.ಎನ್** (ಕ.ಆ.ಸೇ)

**ಸಹಾಯಕ ಆಯುಕ್ತರು, ಬಳ್ಳಾರಿ.**

| ವಾದಿಗಳು | ಪ್ರತಿವಾದಿಗಳು |
|---|---|
| 1.ಶ್ರೀಮತಿ ಗಂಗಮ್ಮ ಗಂಡ ದಿ ಗೊವಿಂದಪ್ಪ, ಸಿಂಧಿಗೇರಿ ಗ್ರಾಮ, ಬಳ್ಳಾರಿ ತಾಲ್ಲೂಕು<br><br>**(ಶ್ರೀ ಜಿ. ನೀಲನಗೌಡ ಮತ್ತು ಹೆಚ್. ಜಿ. ಬಸವರಾಜ, ವಕೀಲರು, ಬಳ್ಳಾರಿ)** | 1. ತಹಶೀಲ್ದಾರರು, ಸಿರುಗುಪ್ಪ<br>2. ಕಂದಾಯ ನಿರೀಕ್ಷಕರು, ಕರೂರು<br>3. ಗ್ರಾಮಲೆಕ್ಕಾಧಿಕಾರಿಗಳು, ಹಾಗಲೂರು<br>4. ಶ್ರೀ ಪಕ್ಕೀರಪ್ಪ ತಂದೆ ದಿ ಮಾರೆಪ್ಪ, ಶಾನವಾಸಪುರ ಗ್ರಾಮ, ಸಿರುಗುಪ್ಪ ತಾಲ್ಲೂಕು<br>5. ಶ್ರೀ ಶರಣನಗೌಡ ತಂದೆ ಲಿಂಗನಗೌಡ, ಶಾನವಾಸಪುರ ಗ್ರಾಮ, ಸಿರುಗುಪ್ಪ ತಾಲ್ಲೂಕು |

**ದಾವಾ ಜಮೀನಿನ ವಿವರ :-**

| ತಾಲ್ಲೂಕು | ಗ್ರಾಮ | ಸ. ನಂ. | ವಿಸ್ತೀರ್ಣ (ಎಕರೆಗಳಲ್ಲಿ) |
|---|---|---|---|
| ಸಿರುಗುಪ್ಪ | ಹಾಗಲೂರು | 376<br>377 | 1.40<br>3.08 |

--@@@--

ವಾದಿಯು ಅವರ ವಕೀಲರ ಮುಖಾಂತರ ಕರ್ನಾಟಕ ಭೂ ಕಂದಾಯ ಕಾಯ್ದೆ 1964 ರ ಕಲಂ 136(2) ರಡಿಯಲ್ಲಿ ಪಾಲು ವಿಭಾಗದ ಪ್ರಕಾರ ಪಹಣಿ ಪತ್ರಿಕೆಯಲ್ಲಿ ನಮೂದಾಗದಿರುವುದರ ಆದೇಶದ ವಿರುದ್ಧ ಈ ನ್ಯಾಯಾಲಯಕ್ಕೆ ಮೇಲ್ಮನವಿಯನ್ನು ಸಲ್ಲಿಸಿರುತ್ತಾರೆ. ಸದರಿ ಮೇಲ್ಮನವಿಯನ್ನು ಸಲ್ಲಿಸುವಲ್ಲಿ ಆದ ವಿಳಂಬಕ್ಕೆ ಕಾಲಮಿತಿ ಕಾಯ್ದೆಯಡಿ ವಿಳಂಬ ಮನ್ನಾಕ್ಕೆ ಅರ್ಜಿ ಸಲ್ಲಿಸಿರುತ್ತಾರೆ. ವಿಳಂಬ ಮನ್ನಾ ಮಾಡಿ ಪ್ರಕರಣವನ್ನು ದಾಖಲಿಸಿಕೊಳ್ಳಲಾಗಿರುತ್ತದೆ. ನೈಸರ್ಗಿಕ ನ್ಯಾಯ ದೃಷ್ಠಿಯಿಂದ ಉಭಯ ಪಕ್ಷಗಾರರಿಗೂ ನೋಟೀಸಗಳನ್ನು ಕಳುಹಿಸಿ ದಿನಾಂಕ: 15-01-2013, 29-01-2013, 20-12-2013, 18-02-2014, 20-02-2015, 29-03-2016, 30-08-2016 ರಂದು ಪ್ರಕರಣದ ವಿಚಾರಣೆಯನ್ನು ಕೈಗೊಳ್ಳಲಾಗಿರುತ್ತದೆ.

ಸದರಿ ಪ್ರಕರಣಕ್ಕೆ ಸಂಬಂಧಿಸಿದಂತೆ ವಾದಿಗಳು ಅವರ ವಕೀಲರು ಮುಖಾಂತರ ಮೇಲ್ಮನವಿ ಸಲ್ಲಿಸುತ್ತಾ ಸಿರುಗುಪ್ಪ ತಾಲೂಕು ಹಾಗಲೂರು ಗ್ರಾಮದ ಸ.ನಂ 376 ವಿಸ್ತೀರ್ಣ 1.40 ಎಕರೆ ಮತ್ತು ಸ.ನಂ 377 ವಿಸ್ತೀರ್ಣ 3.08 ಎಕರೆ ಜಮೀನುಗಳು ತಿಮ್ಮ ನಾಯಕ ಇವರ ಹೆಸರಿನಲ್ಲಿಇದ್ದು ಮೃತ ತಿಮ್ಮನಾಯಕನಿಗೆ ಇಬ್ಬರು ಗಂಡುಮಕ್ಕಳಿದ್ದು, ಒಬ್ಬರು ತಿಮ್ಮನಾಯಕ ಮತ್ತು ಗೋವಿಂದಪ್ಪ ತಿಮ್ಮ ನಾಯಕನ ಮರಣದನಂತರ ಈತನ ಮಕ್ಕಳು ನೊಂದಾಯಿತ ಪಾಲು ಪತ್ರ ಸಂಖ್ಯೆ 24/79-80 ದಿನಾಂಕ 04-04-1979 ರ ಪ್ರಕಾರ ತಿಮ್ಮನಾಯಕ ಮತ್ತು ಗೋವಿಂದಪ್ಪನ ಹೆಂಡತಿ ಗಂಗಮ್ಮ ಇವರ ಹೆಸರಿನಲ್ಲಿ ಏರ್ಪಟ್ಟಿದ್ದು ಈ ಪ್ರಕಾರ ಗಂಗಮ್ಮಳಿಗೆ 'ಎ' ಷಡ್ಯೂಲ್ ಆಸ್ತಿ ಹಾಗೂ ತಿಮ್ಮನಾಯಕನಿಗೆ 'ಬಿ' ಷಡ್ಯೂಲ್ ಆಸ್ತಿ ಪ್ರಾಪ್ತವಾಗಿರುವುದಾಗಿ ತಿಳಿಸಿರುತ್ತಾರೆ ಸದರಿ ಪಾಲು ವಿಭಾಗದ ಪ್ರಕಾರ ಗಂಗಮ್ಮಳು ಪ್ರಸ್ತಾಪಿತ ಜಮೀನಿನ ಹಕ್ಕು ,ಮತ್ತು ಸ್ವಾಧೀನ ಹೊಂದಿರುವುದಾಗಿ ತಿಳಿಸಿರುತ್ತಾರೆ ಆದರೆ ಸದರಿಯವರ ಹೆಸರಿಗೆ ಹಕ್ಕು ಬದಲಾವಣೆಯಾಗಿರುವುದಿಲ್ಲವೆಂದು ಅವರ ಹೆಸರಿನಲ್ಲಿ ಖಾತೆ ಮಾಡಿಕೊಡಲು ಕೋರಿದ್ದು ಪ್ರತಿವಾದಿ (2) ಮತ್ತು (3) ರವರು ಅರ್ಜಿಯನ್ನು ತಿರಸ್ಕರಿಸಿರುತ್ತಾರೆಂದು ಮೇಲ್ಮನವಿಯನ್ನು ಈ ನ್ಯಾಯಾಲಯಕ್ಕೆ ಸಲ್ಲಿಸಿರುತ್ತಾರೆ .

ಮುಂದುವರೆದು ವಾದಿಯು ಪ್ರಸ್ತಾಪಿತ ಜಮೀನಿನ ಸ್ವಾಧೀನಾನುಭವವನ್ನು ಸುಮಾರು 20 ವರ್ಷಗಳಿಂದ ಹೊಂದಿದ್ದುಕಾರಣ ವಾದಿಯ ಹೆಸರಿಗೆ ಪ್ರಸ್ತಾಪಿತ ಜಮೀನನ್ನು ಹಕ್ಕುಬದಲಾವಣೆ ಮಾಡಲು ಕೋರಿರುತ್ತಾರೆ.

ಪ್ರಕರಣದಲ್ಲಿನ ವಾದಿಯ ಮೇಲ್ಮನವಿ ಹಾಗೂ ನ್ಯಾಯಾಲಯಕ್ಕೆ ಹಾಜರು ಪಡಿಸಿದ ದಾಖಲೆಗಳನ್ನು ಪರಿಶೀಲಿಸಲಾಯಿತು, ವಾದಿಗೆ ಕ್ರಮವಾಗಿ ಸಿರುಗುಪ್ಪ ತಾಲ್ಲೂಕಿನ ಹಾಗಲೂರು ಗ್ರಾಮದ ಸ.ನಂ 376, 377 ವಿಸ್ತೀರ್ಣ: 1.40, 3.08 ಎಕರೆ ಜಮೀನು ನೊಂದಾಯಿತ ಪಾಲುವಿಭಾಗದಂತೆ ಬರಬೇಕಿದ್ದು, ಪಟ್ಟದಾರರ ಪಹಣಿಕಾಲಂ (9) ರಲ್ಲಿ ಖಾಲಿ ಇರುವುದು ಕಂಡು ಬಂದಿರುತ್ತದೆ. ಕಾರಣ ಸದರಿ ಪ್ರಕರಣಕ್ಕೆ ಸಂಬಂಧಿಸಿದಂತೆ ತಹಶೀಲ್ದಾರರು

ಸಿರುಗುಪ್ಪ ಇವರು ಪ್ರಸ್ತಾಪಿತ ಜಮೀನುಗಳ ಆಕಾರ್ ಬಂದ್, ಹಾಗೂ ಭೂಮಿ ತಂತ್ರಾಂಶದಲ್ಲಿನ RTC Leaf (Screen shot) ತಾಳೆನೋಡಿ ಅಗತ್ಯ ತಿದ್ದುಪಡಿ ಪ್ರಸ್ತಾವನೆಯನ್ನು ಈ ಆದೇಶ ತಲುಪಿದ 7 ದಿನದೊಳಗಾಗಿ ಈ ಪ್ರಾಧಿಕಾರದ ಅನುಮೋದನೆ ಪಡೆಯಲು ತಹಶೀಲ್ದಾರರು ಸಿರುಗುಪ್ಪ ಇವರಿಗೆ ಗೆ ಆದೇಶಿಸುವ ಈ ಕೆಳಕಂಡ ಆದೇಶ

**:: ಆದೇಶ ::**

ಮೇಲ್ಮನವಿಯನ್ನು ಭಾಗ:ಶ ಪುರಸ್ಕರಿದಸಿದೆ.

ಪೀಠಿಕೆಯಲ್ಲಿ ವಿವರಿಸಿದ ಕಾರಣಗಳ ಹಿನ್ನೆಲೆಯಲ್ಲಿ ಸಿರುಗುಪ್ಪ ತಾಲ್ಲೂಕಿನ ಹಾಗಲೂರು ಗ್ರಾಮದ ಸ.ನಂ 376, 377 ವಿಸ್ತೀರ್ಣ: 1.40, 3.08 ಎಕರೆ ಜಮೀನಿಗೆ ಸಂಬಂಧಿಸಿದಂತೆ ಆಕಾರ್ ಬಂದ್, ಹಾಗೂ ಭೂಮಿ ತಂತ್ರಾಂಶದಲ್ಲಿನ RTC Leaf (Screen shot) ತಾಳೆನೋಡಿ ಅಗತ್ಯ ತಿದ್ದುಪಡಿ ಪ್ರಸ್ತಾವನೆಯನ್ನು ಈ ಆದೇಶ ತಲುಪಿದ 7 ದಿನದೊಳಗಾಗಿ ಈ ಪ್ರಾಧಿಕಾರದ ಅನುಮೋದನೆ ಪಡೆಯಲು ತಹಶೀಲ್ದಾರರು ಸಿರುಗುಪ್ಪ ಇವರಿಗೆ ಆದೇಶಿಸಿದೆ.

ಈ ಆದೇಶವನ್ನು ಹೇಳಿ, ಬರೆಯಿಸಿ,ತಪ್ಪುಗಳನ್ನು ತಿದ್ದಿ **ದಿನಾಂಕ: 30-08-2016** ರಂದು ಬಹಿರಂಗ ನ್ಯಾಯಾಲಯದಲ್ಲಿ ಘೋಷಿಸಲಾಗಿದೆ.

ಸಹಾಯಕ ಆಯುಕ್ತರು,
ಬಳ್ಳಾರಿ

ಸಹಾಯಕ ಆಯುಕ್ತರು,
ಬಳ್ಳಾರಿ.